


ಎಡದಿಂದ ಬಲಕ್ಕೆ:

1. ಸಂಪ್ರದಾಯವನ್ನೇ ಅನುಸರಿಸಿ ಪಡೆದ ಆದಾಯ ಇದು (4)
3. ಈಗ ಮಾರ್ಗ ತೋರಲು ಶ್ರೀಕೃಷ್ಣನೇ ಬರಬೇಕು (3)
4. ಆ ಬಸ್ಸನ್ನು ಏರಿದ್ದು ಅದೃಷ್ಟವೇ ಸರಿ (3)
6. ತೋಳಿಗೆ ಪೂಸಿದ್ದು ಗಾಢವಲ್ಲದ ರಕ್ತವರ್ಣ (4)
7. ಮುಸುಕನ್ನು ಎಳೆದೊಡನೆ ಕಾಣಿಸಿತು ರಾಶಿ ಮರಳು (3)
9. ಅಕ್ಕರೆಯಿಂದ ಕಾಣಿರೆಂದು ಪ್ರಾರ್ಥನೆ (3)
11. ಜೊತೆ ಇರುವ ಎಲ್ಲರಿಗೂ ಬೆಳ್ಳಿಯೇ ಸಿಕ್ಕೀತು (3)
13. ನಕ್ಕವರನ್ನು ಕಂಡೊಡನೆ ಪದ್ಯವೇ ಹಿಂದು ಮುಂದು (3)
15. ತೆಗಳುವವನ ಜೊತೆಗೂ ಒಳ್ಳೆಯ ಸ್ನೇಹವೇ? (4)
17. ನಾವೆಣಿಸಿದಂತೆ ಬೆಳೆಯಲಿಲ್ಲ ಬಿಡಿ ಆ ಧಾನ್ಯ (3)
18. ಕಾವೇರಿಯನ್ನು ನೋಡ ಹೋಗಿದ್ದಾಳೆ ಪ್ರೀತಿಯ ಮಗಳು (3)
19. ಜ್ಞಾಪಕವಿದೆಯಲ್ಲ? ಅದು ಯಾಗದ ಪರಿಣಾಮ (4)

ಮೇಲಿಂದ ಕೆಳಕ್ಕೆ:

1. ಸಂತರ ಗತಿ ಕುರಿತ ಸಮಾಚಾರ ಏನು? (3)
2. ಪನ್ನೀರಳೆಯನ್ನು ಸೇವಿಸಿದ್ದೇ ಮತ್ತೆ ಮತ್ತೆ ಸ್ಮರಣೆ (3)
3. ಆಕೆಯ ಮನಸಿನ ತುಂಬ ಬರೀ ಕೋಪ (3)
5. ಗಾಬರಿಗೊಳಿಸಿದ್ದು ಗಿರಿಗಿರಿ ಸುತ್ತುವ ಆಟಿಗೆ (3)
7. ಉರಿದು ಹೋಯಿತು ನೋಡಿ ಹೊಟ್ಟೆ (3)
8. ಕುಸ್ತಿ ಆಡುತ್ತಿರುವಾಗಲೇ ಸುಸ್ತಾಗಿ ಬಿದ್ದರೆ? (3)
9. ಅಧ್ಯಯನ ಸರಿ ಇಲ್ಲದೆ ಎಲ್ಲ ಕೆಟ್ಟುಹೋಯಿತು (3)
10. ಕಂಡ ಕಂಡದ್ದನ್ನೆಲ್ಲ ಹಾಳು ಮಾಡುವ ನೀಚ (3)
12. ಜಾನುವಾರುಗಳನ್ನೆಲ್ಲ ಕಾಯಲು ಒಬ್ಬ ಸೇವಕ ಬೇಕೇ? (3)
14. ಮೇಲೇರಿಲ್ಲವೇ ಇನ್ನೂ ಈ ಬಳ್ಳಿ? (3)
15. ಗಣ್ಯರ ಗುಂಪಿನಲ್ಲಿ ಯಾರೀ ಮಿತ್ರ? (3)
16. ವ್ಯಾಕುಲನಾದವ ಮಾದ್ರಿಯ ಮಗ ತಾನೇ? (3)

## ಪದಬಂಧ 9-8-2012 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸುಲಿಗೆ; 3. ವ್ಯಾಪಾರ; 4. ಬವರ; 6. ಮಹಾಲಯ; 7. ಸಸ್ಯವಿಧ; 9. ವಿಪ್ರಲಂಭ; 11. ರಾಜರಾಣಿ; 15. ನಳಿನ; 16. ಮೋಹಿನಿ; 17. ಕಳಸ.

ಮೇಲಿಂದ ಕೆಳಕ್ಕೆ:

1. ಸುರಭಿ; 2. ಗೆಬರು; 3. ವ್ಯಾಕುಲ; 5. ರಹಸ್ಯ; 6. ಮನವಿ; 8. ಧರಣಿ; 10. ಲಂಘನ; 12. ಜನನಿ; 13. ಪಾನಕ; 14. ಸಮೋಸ.

# ಪ್ರಶ್ನಾಂಕಣ

## ಧೂಳು ದೆವ್ವ - ಅದೇನು?

ಧೂಳು ದೆವ್ವ (ಡಸ್ಟ್ ಡೆವಿಲ್)– ಅದು ಹವಾ ವಿದ್ಯಮಾನವೊಂದರ ವಿನೋದದ ಹೆಸರು. 'ಗಾಳಿ ದೆವ್ವ' ಎಂದು ಪ್ರಸಿದ್ಧವಾಗಿರುವ ಈ ವಿದ್ಯಮಾನವನ್ನು ನೋಡಿಲ್ಲದವರು ಅಪರೂಪ.

ಸಾಮಾನ್ಯವಾಗಿ ಸುಡುಬೇಸಿಗೆಯ ಮಧ್ಯಾಹ್ನಗಳಲ್ಲಿ ವಿಶಾಲ ಬಯಲುಗಳಲ್ಲಿ ಇದ್ದಕ್ಕಿದ್ದಂತೆ ನೆಲದ ಮೇಲೆ ಅವತರಿಸಿ, ಧೂಳು ಕಸ ಕಡ್ಡಿಗಳನ್ನೆಲ್ಲ ಮುಗಿಲತ್ತ ಸೆಳೆಯುತ್ತ, ಭರದಿಂದ ಸುತ್ತುತ್ತ, ಅತ್ತಿತ್ತ ಸಾಗಿ ಅಷ್ಟೇ ಇದ್ದಕ್ಕಿದ್ದಂತೆ ಮಾಯವಾಗುವ ಸೋಜಿಗದ ವಿದ್ಯಮಾನ ಇದು. ಹಾಗೆ ಅಗೋಚರವಾಗಿ ಉದ್ಭವಿಸಿ, ಚಿತ್ರ ವಿಚಿತ್ರ ನಡವಳಿಕೆ ಪ್ರದರ್ಶಿಸಿ, ಮಾಯಮಯವಾಗಿ ಕಣ್ಮರೆಯಾಗುವ ವಿದ್ಯಮಾನ ಆಗಿರುವುದರಿಂದಲೇ ಇದಕ್ಕೆ 'ದೆವ್ವ' ಬೆಸೆದ ಹೆಸರು!

ವಾಸ್ತವವಾಗಿ ಡಸ್ಟ್ ಡೆವಿಲ್ ಕೂಡ 'ಸುತ್ತುವ ಗಾಳಿ'ಗಳಾದ ಡಿಪ್ರೆಶನ್, ಸೈಕ್ಲೋನ್, ಟಾರ್ನೆಡೋ (ಸುಂಟರಗಾಳಿ) ಇತ್ಯಾದಿ ವರ್ಗಕ್ಕೇ ಸೇರಿದೆ. ಅದರಲ್ಲೂ ಭೀಕರ ಪ್ರಳಯಕರ ಸುಂಟರಗಾಳಿಗೆ ಡಸ್ಟ್ ಡೆವಿಲ್ ನೇರ ನಿಕಟ ಸಂಬಂಧಿ. ಆದರೆ ಸುಂಟರಗಾಳಿಗೆ ಹೋಲಿಸಿದರೆ ಧೂಳು ದೆವ್ವ ತುಂಬ ದುರ್ಬಲ, ತುಂಬ ನಿರಪಾಯಕರ, ಸೋಜಿಗದ, ಕುತೂಹಲದ, ಕ್ಷಣಗಳಷ್ಟೇ ಕಾಲದ ದೃಶ್ಯ ಸೃಷ್ಟಿಸುವುದಷ್ಟೇ ಅದರ ವೈಶಿಷ್ಟ್ಯ.



### ಧೂಳು ದೆವ್ವ ಮೈದಾಳುವುದು ಹೇಗೆ?

ಬೇಸಿಗೆಯ ಮಧ್ಯಾಹ್ನದ ತೀವ್ರ ಬಿಸಿಲಲ್ಲಿ ವಿಶಾಲ ಬಯಲುಗಳ ನೆಲ ತುಂಬ ಬಿಸಿಯಾಗುತ್ತದೆ. ಹಾಗಾಗಿ ಅಲ್ಲಿನ ಗಾಳಿಯೂ ಬಿಸಿಯಾಗಿ ಹಗುರಗೊಂಡು ಕ್ಷಿಪ್ರವಾಗಿ ಮೇಲೇರುತ್ತಿರುತ್ತದೆ. ಅದೇ ವೇಳೆಯಲ್ಲಿ ಅಧಿಕ ಒತ್ತಡದ ಕಡೆಗಳಿಂದ ಅಲ್ಲಿಗೆ ಹರಿದು ಬರುವ ಗಾಳಿ ಪ್ರವಾಹ ಅಂಥ ಬಯಲಿನ ಆಸುಪಾಸಿನ ತಗ್ಗು ತಿಟ್ಟುಗಳನ್ನು ಬಳಸಿ ಹರಿಯುವಾಗ ಸುತ್ತುವ ಗುಣ ಗಳಿಸಿ ಆಗಮಿಸಿ ಮೇಲೇರುತ್ತಿರುವ ಬಿಸಿ ಗಾಳಿ ರಾಶಿಯೊಡನೆ ಬೆರೆತು ನೆಲದಿಂದ ಮುಗಿಲತ್ತ ಚಾಚಿದ ಕಂಬದಂತೆ, ಕೊಳವೆಯಂತೆ, ಆಲಿಕೆಯಂತೆ ರೂಪ ತಳೆಯುತ್ತದೆ. ಗಿರಿಗಿರಿ ತಿರುಗುತ್ತಿರುವ ಈ ಅಗೋಚರ ಗಾಳಿ ಕೊಳವೆಯೊಳಕ್ಕೆ ನುಗ್ಗುವ ಬಿಸಿಗಾಳಿ ತನ್ನೊಡನೆ ನೆಲದ ಮೇಲಿನ ಹಗುರ ವಸ್ತುಗಳನ್ನೆಲ್ಲ– ಧೂಳು, ಮರಳು, ಒಣ ಎಲೆ, ಕಾಗದ, ಪ್ಲಾಸ್ಟಿಕ್ ಇತ್ಯಾದಿ– ಮೇಲಕ್ಕೆ ಸೆಳೆದು ಒಯ್ಯುತ್ತದೆ. ಈ ವಸ್ತುಗಳಿಂದಾಗಿ ಗಾಳಿದೆವ್ವ ಗೋಚರಿಸುತ್ತದೆ (ಚಿತ್ರ ನೋಡಿ) ಹತ್ತಾರು ಅಡಿಗಳಿಂದ ಸಾವಿರ ಅಡಿ ಎತ್ತರದವರೆಗೂ ತಲುಪಿ ತಿರುಗುತ್ತ ತಿರುಗುತ್ತ ಓಡುವ ಸುಳಿದಾಡುವ 'ಡಸ್ಟ್ ಡೆವಿಲ್'ನದು ವಿಸ್ಮಯಕರ ದೃಶ್ಯ. ನೆಲದಿಂದ ಮೇಲೇರುವ ಬಿಸಿ ಗಾಳಿ ಅಲಭ್ಯವಾದೊಡನೆ ಧೂಳು ದೆವ್ವ ಮಾಯವಾಗುತ್ತದೆ. ಅದರೊಡನೆ ಎತ್ತರಕ್ಕೇರಿದ ಕಸ–ಕಡ್ಡಿಗಳೆಲ್ಲ ನೆಲಕ್ಕೆ ಇಳಿಯುತ್ತವೆ. ಬಿಸಿ ಮರುಭೂಮಿಗಳಲ್ಲಿ ಗಾಳಿ ದೆವ್ವಗಳು ಬಹಳ.